**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭಾ ಚುನಾವಣಾ ಕ್ಷೇತ್ರ) ರವರು ನಿಯಮ-72ರಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಚಿವರ ಉತ್ತರ.**

**ವಿಷಯ:** ವಿದೇಶಗಳಲ್ಲಿ ಕಡಿಮ ಬೆಲೆಗೆ ದೊರೆಯುವ ಡ್ರಗ್ಸ್ ರಫ್ತು ಮಾಡಿಕೊಂಡು ಬೆಂಗಳೂರು ನಗರದಲ್ಲಿ ಮಾರಾಟ ಮಾಡುತ್ತಿರುವ ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿವೆ. ಹಲವಾರು ವಿದೇಶಿ ಡ್ರಗ್ಸ್ ಪೆಡ್ಲರ್ ಗಳು ಡ್ರಗ್ಸ್ ಮಾರಾಟ ದಂಧೆಯಲ್ಲಿ ನಿರಂತರವಾಗಿ ಭಾಗಿಯಾಗುತ್ತಾ ಬಂದಿರುವುದು ಕಂಡುಬಂದಿದೆ. ಹೊರದೇಶಗಳಲ್ಲಿ ಕಡಿಮ ಬೆಲೆಗೆ ದೊರೆಯುವ ಡ್ರಗ್ಸ್ ರಫ್ತು ಮಾಡಿಕೊಂಡು ಬೆಂಗಳೂರು ನಗರದಲ್ಲಿ ಸಾರ್ವಜನಿಕರಿಗೆ, ಐಟಿ ಕಂಪನಿಯ ಉದ್ಯೋಗಿಗಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಹೋಟೆಲ್ ಮತ್ತು ಪಬ್ ಗಳಿಗೆ ಹೆಚ್ಚಿನ ಬೆಲೆಗೆ ಅಕ್ರಮವಾಗಿ ಮಾರಾಟ ಮಾಡುವ ಜಾಲವನ್ನು ಡ್ರಗ್ಸ್ ಪೆಡ್ಲರ್ ಗಳು ಬಹು ವ್ಯವಸ್ಥಿತವಾಗಿ ಮತ್ತು ಹೈಟೆಕ್ ಮಾದರಿಯಲ್ಲಿ ಈ ಹೆಣೆದಿರುವುದು ಕಂಡು ಬಂದಿದ್ದು, ಅಂಥವರ ವಿರುದ್ಧ ಸರ್ಕಾರ ಅತ್ಯಂತ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣಗೊಂಡಿದೆ.

ನಾಗರೀಕ ಸಮಾಜಕ್ಕೆ ಪಿಡುಗು ಮತ್ತು ಸವಾಲಾಗಿ ಪರಿಣಮಿಸಿರುವ ಹಾಗೂ ದಿನೇದಿನೇ ವಿವಿಧ ಮಾದರಿಯಲ್ಲಿ ವ್ಯಾಪಕವಾಗಿ ಹರಡುತ್ತಿರುವ ಡ್ರಗ್ಸ್ ಜಾಲಕ್ಕೆ ಶಾಶ್ವತವಾಗಿ ಕಡಿವಾಣ ಹಾಕಲು ಸರ್ಕಾರ ಇದುವರೆಗೆ ಯಾವುದೇ ಪರಿಣಾಮಕಾರಿ ಹಾಗೂ ನಿರ್ದಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಉಂಟಾಗಿರುವ ಅತ್ಯಂತ ಗಂಭೀರ ಸಮಸ್ಯೆ ಕುರಿತು ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:-**

ಕಳೆದ 03 ವರ್ಷಗಳಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ದಾಖಲಾದ ಎನ್ ಡಿ ಪಿ ಎಸ್ ಪ್ರಕರಣಗಳು, ಆರೋಪಿಗಳ ದಸ್ತಗಿರಿ ಹಾಗೂ ಜಪ್ತಿ ಮಾಡಿದ ಡ್ರಗ್ಸ್ ವಿವರ ಈ ಕೆಳಕಂಡಂತಿದೆ:-

**Details of NDPS Cases and Seized drugs during 2023 to 2026 (28.02.2026)**

| Sl. No. | Year | Total No. of Cases | | | Accused Arrested | | Qty. of Drugs seized (in KGs) | Value of Drugs Seized (in Crores) |
|---|---|---|---|---|---|---|---|---|
| | | On Peddler | On Consumer | Total | Indian | Foreigner | | |
| 1 | 2023 | 704 | 2825 | 3529 | 4417 | 101 | Ganja-5272.173 K.G<br>Synthetic-138.324 K.G<br>3777 Tablets &<br>870 Strips | 103.3 |
| 2 | 2024 | 498 | 32 | 530 | 681 | 61 | Ganja-1857.463 K.G<br>Synthetic- 112.071 K.G<br>15448 Tablets &<br>3770 Strips | 98.85 |
| 3 | 2025 | 503 | 898 | 1401 | 1867 | 60 | Ganja- 1366.254 K.G<br>Synthetic-133.563 K.G<br>3434 Tablets & 240 Strips | 177.53 |
| 4 | 2026 | 160 | 1122 | 1282 | 1722 | 13 | Ganja- 408.798 K.G&<br>Synthetic-41.495 K.G,<br>3468 Tablets, 129 Strips &Escup Syruf 73.200 ltr | 30.87 |

| PIT NDPS Act Invoked and Property Confiscated /Forfeited on Drug Peddlers | | | |
|---|---|---|---|
| Sl No | YEAR | No. of PIT NDPS Cases Invoked | No of Persons Property Confiscated /Forfeited |
| 1 | 2023 | 1 | - |
| 2 | 2024 | 4 | 2 |
| 3 | 2025 | 5 | 1 |
| 4 | 2026 | 0 | 0 |
| Total | | 10 | 3 |

| No. of Awareness Programs Conducted by Police Officers about Drug, Cyber Cases and Women Safety-during the Year 2023 to 2026 (Upto 28.02.2026) | | | | | | |
|---|---|---|---|---|---|---|
| Sl No | Month wise | Number of Police Officers | Number of School/College/ Hostel Visited | Number of Students Participated | Number of Publics Participated | Number of Social Media Awareness Conducted |
| 1 | 2023 | 1,368 | 1,439 | 3,67,608 | 1,11,170 | 1,029 |
| 2 | 2024 | 5,613 | 4,430 | 6,06,198 | 1,19,365 | 1,531 |
| 3 | 2025 | 8,871 | 6,259 | 8,39,643 | 1,69,115 | 2,122 |
| 4 | 2026 | 962 | 773 | 84,781 | 43,792 | 3,718 |
| Total | | 16,814 | 12,901 | 18,98,230 | 4,43,442 | 8,400 |

**ಈ ದಂಧೆಯನ್ನು ಹತ್ತಿಕ್ಕಲು ಬೆಂಗಳೂರು ನಗರ ಪೊಲೀಸರು ಈ ಕೆಳಕಂಡ ಕ್ರಮಗಳನ್ನು ಅನುಸರಿಸುತ್ತಿದ್ದಾರೆ:-**

- ಮಾದಕ ವಸ್ತು ಮಾರಾಟ ಮತ್ತು ಸೇವನೆ ಮಾಡುವವರ ವಿರುದ್ಧ ಸಾರ್ವಜನಿಕರು ದೂರು ನೀಡಲು ಟೋಲ್ ಫ್ರೀ ಸಂಖ್ಯೆ 1908/1933 (MANAS Portal) ರಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿದೆ. ಈ ದೂರವಾಣಿಯ ಮುಖಾಂತರ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳನ್ನು ಸಂಪರ್ಕಿಸಿ ಮಾಹಿತಿ ನೀಡುವ ಯೋಜನೆಯನ್ನು ಪ್ರಾರಂಭಿಸಲಾಗಿದೆ.
- ಒಂದು ಬಾರಿಗಿಂತ ಹೆಚ್ಚು ಬಾರಿ ಎನ್.ಡಿ.ಪಿ.ಎಸ್. ಪ್ರಕರಣಗಳಲ್ಲಿ ಭಾಗಿಯಾದ ಹಾಗೂ ರೂಢಿಗತ ಡ್ರಗ್ಸ್ ಆರೋಪಿತರಿಗೆ PIT-NDPS, ಕಾಯ್ದೆ-1988 ರಡಿಯಲ್ಲಿ ಕ್ರಮ ಜರುಗಿಸಲಾಗಿದೆ.

ಬೆಂಗಳೂರು ನಗರದಲ್ಲಿ ಕಳೆದ ಮೂರು ವರ್ಷದಲ್ಲಿ ಒಟ್ಟು 10 ಜನ ಡ್ರಗ್ಸ್ ಆರೋಪಿತರ ಮೇಲೆ PIT-NDPS ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿರುತ್ತದೆ.

- ಯುವಕರು ಹೆಚ್ಚಾಗಿ ಸೇರುವ ಸ್ಥಳಗಳಾದ ಬಾರ್ ಮತ್ತು ರೆಸ್ಟೋರೆಂಟ್, ಕಾಫಿ-ಡೇ, ಪಬ್, ಡ್ಯಾನ್ಸ್ ಬಾರ್, ಶಾಲಾ-ಕಾಲೇಜು ಆವರಣ, ಬಸ್ ನಿಲ್ದಾಣ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಮಾದಕ ದ್ರವ್ಯ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಕಾನೂನಿನ ರೀತಿ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತಿದೆ. ಸಾರ್ವಜನಿಕರ ಗಮನ ಸೆಳೆಯಲು ಬ್ಯಾನರ್, ವಿದ್ಯುನ್ಮಾನ ಜಾಗೃತಿ ಫಲಕಗಳು ಹಾಗೂ ಪೋಸ್ಟರ್‌ಗಳನ್ನು ಜನಸಂದಣಿ ಇರುವ ಸ್ಥಳಗಳಲ್ಲಿ ಪ್ರದರ್ಶಿಸಿ ಕರ ಪತ್ರ ಹಂಚಲಾಗುತ್ತಿದೆ. ಜೊತೆಗೆ ಕಿರುಚಿತ್ರಗಳ ಮೂಲಕ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತಿದೆ.

- ಬೆಂಗಳೂರು ನಗರದಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಸಲುವಾಗಿ ಆರೋಪಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸಿ ಕಳೆದ ಮೂರು ವರ್ಷದಲ್ಲಿ NDPS Chapter V ರಡಿಯಲ್ಲಿ 3 ಡ್ರಗ್ಸ್ ಪೆಡ್ಲರ್‌ಗಳ ಸ್ಥಿರಾಸ್ತಿ/ ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

- ಬೆಂಗಳೂರು ನಗರ ಪೊಲೀಸರು ವಿದ್ಯಾಸಂಸ್ಥೆಗಳ ಬಳಿ ಮಾದಕ ವಸ್ತು ಪದಾರ್ಥಗಳ ಮಾರಾಟ / ಸೇವನೆ ಮಾಡುತ್ತಿದ್ದವರ ವಿರುದ್ಧ ನಿರಂತರ ವಿಶೇಷ ಕಾರ್ಯಾಚರಣೆ ನಡೆಸಿ ಮಾರಾಟ ಮಾಡುತ್ತಿದ್ದವರು ಮತ್ತು ಸೇವನೆ ಮಾಡಿದವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ.

- ಸಾರ್ವಜನಿಕರು ಮಾದಕ ವಸ್ತುಗಳ ಸಾಗಾಣೆ ಅಥವಾ ಮಾರಾಟ ಮಾಡುವವರ ಬಗ್ಗೆ "Drug Free App" ಅನ್ನು ಬಳಸಿ ಅದರ ಮೂಲಕ ಗೌಪ್ಯವಾಗಿ ಸ್ಥಳೀಯ ಪೊಲೀಸರಿಗೆ ಮಾದಕ ವಸ್ತುಗಳ ಕಳ್ಳಸಾಗಾಣಿಕೆ, ಸೇವನೆ, ಸಂಗ್ರಹಣೆ, ಸಾಗುವಳಿ, ತಯಾರಿಸುವ ಘಟಕಗಳ ಮಾಹಿತಿಯನ್ನು ನೀಡುವಂತಹ ಸೇವೆಯನ್ನು ಆರಂಭಿಸಲಾಗಿದೆ.

- ಅತ್ಯಂತ ವ್ಯವಸ್ಥಿತ ಮತ್ತು ಹೈಟೆಕ್ ಮಾದರಿಯ ಈ ಜಾಲವನ್ನು ಪತ್ತೆ ಮಾಡಲು ಮತ್ತು ಶಾಶ್ವತವಾಗಿ ಕಡಿವಾಣ ಹಾಕಲು ICJS, NIDAAN, MCCTNS ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ಡಾರ್ಕ್‌ವೆಬ್‌ಗಳ ಮೂಲಕ ನಡೆಯುವ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ಡಾರ್ಕ್‌ವೆಬ್‌ಗಳ ಬಳಕೆಯ ಬಗ್ಗೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದೆ.

- ನಗರದಲ್ಲಿ ಡ್ರಗ್ಸ್ ಅಕ್ರಮಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಸಲುವಾಗಿ NCB, Medical and Mental Health Department, CCB, BBMP, Social Welfare, Revenue, Commercial Tax, FRRO, Customs, Railway ಹಾಗೂ Education ಇಲಾಖೆಗಳ ಅಧಿಕಾರಿಗಳ ಸಮನ್ವಯ ಸಭೆಯನ್ನು (NCORD Meeting) ನಡೆಸಲಾಗಿದೆ.

- ಮಾದಕ ಜಾಲದಲ್ಲಿ ಭಾಗಿಯಾದವರ ಬದಲಾವಣೆಗಾಗಿ ಸನ್ಮಿತ್ರ ಯೋಜನೆಯನ್ನು ಅಳವಡಿಸಿ ಕೊಳ್ಳಲಾಗಿದೆ.

- ಪ್ರತಿ ಮಾಹೆಯ ಅಂತ್ಯದಲ್ಲಿ ಹಾಗೂ ಪ್ರತಿ ವರ್ಷ ಜೂನ್ 26 ರಂದು ಮಾದಕ ವಸ್ತುಗಳ ನಿಗ್ರಹ ದಿನವನ್ನು ಆಚರಣೆ ಮಾಡಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.

- ದಿನಾಂಕ:26.06.2025ರ ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಅಕ್ರಮ ಸಾಗಾಣಿಕೆ ವಿರೋಧಿ ದಿನಾಚರಣೆ ಅಂಗವಾಗಿ ವ್ಯಸನ ಮುಕ್ತ ಧ್ಯೇಯದೊಂದಿಗೆ ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮಕ್ಕೆ ಸುಮಾರು 500ಕ್ಕೂ ಹೆಚ್ಚು ಕಾಲೇಜುಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿ, ಮಾನ್ಯ ಗೃಹ ಸಚಿವರಿಂದ ಮಾದಕ ವಸ್ತುಗಳ ವಿರುದ್ಧ ಜೀವನ ಶೈಲಿಗೆ ಪ್ರತಿಜ್ಞಾ ವಿಧಿ ಬೋಧಿಸಿದ್ದನ್ನು, 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು

ಸ್ವೀಕರಿಸಿರುತ್ತಾರೆ. 1 ಲಕ್ಷಕ್ಕೂ ಹೆಚ್ಚು ಜನರು ಯೂ-ಟ್ಯೂಬ್ ಮೂಲಕ ಈ ಪ್ರತಿಜ್ಞಾ ವಿಧಾನದ ಕಾರ್ಯಕ್ರಮವನ್ನು ವೀಕ್ಷಿಸಿರುತ್ತಾರೆ. ಸಮಾರಂಭದ ಸ್ಥಳದಲ್ಲಿ ಭೌತಿಕವಾಗಿ ಹಾಜರಿದ್ದ ಏಳು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಜ್ಞಾ ವಿಧಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಪೊಲೀಸ್ ವ್ಯವಸ್ಥೆಯನ್ನು ಉತ್ತಮವಾಗಿ ಜಾರಿಗೊಳಿಸಿದ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರಶಸ್ತಿ ನೀಡಲಾಯಿತು.

- ಬೆಂಗಳೂರು ನಗರದ ಪೊಲೀಸರು ಮನೆ-ಮನೆಗೆ ಪೊಲೀಸ್ ಕಾರ್ಯಕ್ರಮದಡಿಯಲ್ಲಿ ಪ್ರತಿ ಮನೆಗಳಿಗೂ ತೆರಳಿ "Drug-Free Bengaluru" ಜಾಗೃತಿ ಅಭಿಯಾನಗಳನ್ನು ಆಯೋಜಿಸಿ ಡ್ರಗ್ಸ್ ಹಾವಳಿಯನ್ನು ತಡೆಗಟ್ಟಲು ಶ್ರಮಿಸುತ್ತಿದ್ದಾರೆ.

ದಿ: 26 ಫೆಬ್ರವರಿ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು